ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕ ಗೋಪುರ, ಮೂರನೇ ಮಹಡಿ,
ಡಾ॥ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ
E-mail ID:icps.kar@gmail.com Phone No: 080-22867383

ಸಂಖ್ಯೆ:ಕೆಎಸ್‌ಐಸಿಪಿಎಸ್/ಐಇಸಿ/ಮ.ಜಾ/06/2020-21 ದಿನಾಂಕ:08-10-2021

## ಸುತ್ತೋಲೆ

ವಿಷಯ:-ಮಕ್ಕಳ ಪಾಲನಾ ಸಂಸ್ಥೆಯ ಮಕ್ಕಳಿಗಾಗಿ **"ಉಲ್ಲಾಸ"** ಕಾರ್ಯಕ್ರಮದ ಅಡಿಯಲ್ಲಿ ಆಯೋಜಿಸಲಾಗುತ್ತಿರುವ Taekwondo ಚಟುವಟಿಕೆಯಲ್ಲಿ ಮಕ್ಕಳು ಧರಿಸಲು ಚಟುವಟಿಕೆ ಸಂಬಂಧಿಸಿದ ಸೂಕ್ತ ಬಟ್ಟೆ ಮಕ್ಕಳಿಗೆ ಒದಗಿಸುವ ಬಗ್ಗೆ.

* * * *

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಕ್ಕಳ ಜಾಗೃತಿ ಸಹಯೋಗದೊಂದಿಗೆ ಉಲ್ಲಾಸ ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳ ಪಾಲನಾ ಸಂಸ್ಥೆ ಮಕ್ಕಳಿಗಾಗಿ Taekwondo ಚಟುವಟಿಕೆಯನ್ನು ಆಯೋಜಿಸಲಾಗುತ್ತಿರುವುದು ಸರಿಯಷ್ಟೆ.

ಚಟುವಟಿಕೆಯಲ್ಲಿ ಭಾಗವಹಿಸುವ ಮಕ್ಕಳು ಚಟುವಟಿಕೆಗೆ ಸೂಕ್ತವಾದ ಬಟ್ಟೆ ಧರಿಸದೇ ಇರುವುದು ಕಂಡು ಬಂದಿದೆ. ಚಟುವಟಿಕೆಗೆ ತಕ್ಕಂತೆ ಸೂಕ್ತ ಬಟ್ಟೆ ಧರಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಲ್ಲಿ, ಮಕ್ಕಳು ಕಲಿಕೆಯಲ್ಲಿ ಇನ್ನೂ ಹೆಚ್ಚು ಉತ್ಸುಕರಾಗಬಹುದಾಗಿರುತ್ತದೆ.

ಆದ್ದರಿಂದ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಯ ಮಕ್ಕಳಿಗೆ Taekwondo ಚಟುವಟಿಕೆಗೆ ಸೂಕ್ತವಾದ ಬಟ್ಟೆಯನ್ನು ಖರೀದಿಸಿ ನೀಡಲು ಸೂಚಿಸಿದೆ. ಇದರ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-102-0-36 ಉಪ ಶೀರ್ಷಿಕೆ 221ರ ಸಾಮಾಗ್ರಿ ಸರಬರಾಜು ಅಡಿಯಲ್ಲಿ ಭರಿಸಲು ಸೂಚಿಸಿದೆ ಮತ್ತು ಖರೀದಿಯ ಪ್ರಕ್ರಿಯೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ಮತ್ತು ನಿಯಮಗಳನ್ನು ಪಾಲಿಸಿಕೊಂಡು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಅಡಿಯಲ್ಲಿ ಖರೀದಿಸಲು ಸೂಚಿಸಿದೆ.

08.10.2021
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.

ಗೆ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು

ಪ್ರತಿಯನ್ನು:

- ಎಲ್ಲಾ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಯ ಅಧೀಕ್ಷರುಗಳಿಗೆ ಮಾಹಿತಿಗಾಗಿ
- ಕಛೇರಿ ಪ್ರತಿ

CHILD LINE 1098